# ನಾನು ನಿನ್ನ ನಿಜವಾದ ತಾಯಿ

❑ ಕೆ. ಎಸ್. ಚಂದ್ರಾ

**ಸಕಲ ಜೀವಿಗಳನ್ನು ಪ್ರೀತಿಸುವ, ಸ್ವೀಕರಿಸುವ ಶಕ್ತಿಯು ಶ್ರೀಮಾತೆ ಶಾರದಾದೇವಿಯವರಲ್ಲಿ ಅನನ್ಯವಾದ ರೀತಿಯಲ್ಲಿ ಅಭಿವ್ಯಕ್ತವಾದುದರ ಒಂದು ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀಮತಿ ಕೆ.ಎಸ್. ಚಂದ್ರಾ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರಾಗಿದ್ದಾರೆ.**

ಭರವಸೆಯೇ ಜೀವನದ ಅಡಿಪಾಯ. ವಿಶ್ವಾಸರಹಿತನಾದವನ ಜೀವನ ಒಂದು ಸಮರ. ಆಶ್ವಾಸನೆಯ ಆಕರವಾದ ಶ್ರೀಮಾತೆ ಶಾರದಾದೇವಿಯವರ ಸಾಂತ್ವನದ ನುಡಿಗಳನ್ನು ಮೆಲುಕು ಹಾಕುವುದೇ ಮಕ್ಕಳಾದ ನಮ್ಮೆಲ್ಲರ ಪಾಲಿಗೆ ಶ್ರೀರಕ್ಷೆ. ಇವು ಸ್ವಾಮಿ ವಿವೇಕಾನಂದರ ವಾಣಿಗಳಂತೆ ಪ್ರಖರವಾಗಿಲ್ಲ ಅಥವಾ ಶ್ರೀರಾಮಕೃಷ್ಣರ ನುಡಿಗಳಂತೆ ಬಹು ಆಳವಾದ ಗಭೀರತೆಯಿಂದ ಕ್ಲಿಷ್ಟವಾಗಿಲ್ಲ. ಮಾತೆಯವರ ನುಡಿಗಳು ಹಸಿದ ಮಗುವನ್ನು ತಣಿಸಲು ಮಮತಾಮಯಿ ತಾಯಿಯು ನೀಡುವ ಆಹಾರದಂತೆ ಅತ್ಯಂತ ಆರೋಗ್ಯಕರವೂ, ಸುಲಭವಾಗಿ ಜೀರ್ಣವಾಗುವಂತಹವೂ ಆಗಿವೆ. ರಚ್ಚೆ ಹಿಡಿದು ಅಳುವ ಮಗುವನ್ನು ರಮಿಸುವ ಸ್ನೇಹಮಯಿ ತಾಯಿಯು ವಿವಿಧ ವಿಧಾನಗಳನ್ನು ಬಳಸುವಂತೆ, ಶ್ರೀಮಾತೆಯವರು ತಮ್ಮ ಅಸಂಖ್ಯಾತ ಮಕ್ಕಳಿಗೆ ಅವರವರ ಮನಃಸ್ಥಿತಿಗೆ ಅನುಗುಣವಾದ ಸಂದೇಶಗಳನ್ನು ಕೊಟ್ಟಿದ್ದಾರೆ.



**ಮಗು, ನಿಮ್ಮಲ್ಲಿ ಯಾರಿಗಾದರೂ ಒಂದು ಸಣ್ಣ ಮುಳ್ಳು ಚುಚ್ಚಿದರೂ ಸಾಕು, ನನ್ನ ಎದೆಗೆ ಕತ್ತಿಯಿಂದ ತಿವಿದಂತಾಗುತ್ತದೆ.**
**—ಶ್ರೀಶಾರದಾದೇವಿ**

"ಶ್ರೀಮಾತೆ" ಎಂದು ಕರೆಯಿಸಿಕೊಳ್ಳುತ್ತಿರುವ ಶ್ರೀಶಾರದಾದೇವಿಯವರ ವ್ಯಕ್ತಿತ್ವದಲ್ಲಿ ಎದ್ದುಕಾಣುವ ಗುಣವೆಂದರೆ ಮಾತೃಪ್ರೇಮ. ಹಾಗೆ ನೋಡಿದರೆ ಶ್ರೀಮಾತೆಯವರಿಗೆ ಶಾರೀರಿಕವಾಗಿ ತಾಯ್ತನದ ಅನುಭವವಾಗಿರಲಿಲ್ಲ. ಆದರೂ ಅವರು ನಮ್ಮೆಲ್ಲರ ತಾಯಿ. ಇದು ಹೇಗೆ? ಇದೊಂದು ಆಲೋಚನೆ ಮಾಡುವಂತಹ ಅಂಶವಷ್ಟೇ ಅಲ್ಲ, ಜೀವನದಲ್ಲಿ ವಿಶ್ವಾಸವನ್ನು ನೂರ್ಮಡಿ ಮಾಡುವಂತಹ ಸತ್ಯಾಂಶ. ಶ್ರೀಮಾತೆಯವರೇ ನುಡಿದಿರುವಂತೆ, "ನೀನು ಕಷ್ಟದಲ್ಲಿದ್ದಾಗಲೆಲ್ಲ ನೆನಪಿಡು. ನಿನಗೊಬ್ಬ ತಾಯಿ ಇರುವಳು ಎಂದು"—ಎಂಬ ಮಹಾ ಆಶ್ವಾಸನೆಯ ನುಡಿಯು ಅನೇಕರ ಜೀವನವನ್ನು ಪರಿವರ್ತಿಸಿದೆ, ಬಾಳನ್ನು ಅರ್ಥಪೂರ್ಣವನ್ನಾಗಿ ಮಾಡಿದೆ. ಶ್ರೀಮಾತೆಯವರು ತಮ್ಮ ಜೀವಿತಕಾಲದಲ್ಲಿ ಅನೇಕ ದುಃಖಿತಪ್ತರ ಹೃದಯಕ್ಕೆ ತಂಪನ್ನು ನೀಡಿದ್ದು ಸಹಜವೆನಿಸಬಹುದು. ಆದರೆ ಇಂದು, ಅವರ ಮಹಾಸಮಾಧಿಯಾಗಿ ಅನೇಕ ವರ್ಷಗಳೇ ಸಂದಿದ್ದರೂ ಸಹ ಅವರ ಮಾತೃಪ್ರೇಮವು ನಿರಂತರವಾಗಿ ಅವರ ಅಸಂಖ್ಯಾತ ಮಕ್ಕಳೆಡೆ ಹರಿಯುತ್ತಿರುವುದು ಸೋಜಿಗವಷ್ಟೇ ಅಲ್ಲ, ಒಂದು ದಿವ್ಯ ಅನುಭವವೂ ಹೌದು.

"ತಾಯಿ" ಎಂಬ ಶಬ್ದದ ಸಾಮಾನ್ಯ ಅರ್ಥ, ತಾನು ಜನ್ಮಕೊಟ್ಟ ಶಿಶುವನ್ನು ಲಾಲಿಸುವವಳು, ಪಾಲಿಸುವವಳು ಹಾಗೂ ಅದರ ಬೆಳವಣಿಗೆಯನ್ನು ಕಂಡು ಆನಂದಿಸುವವಳು ಎಂದು. ತನ್ನ ಮಗುವನ್ನು ಮುದ್ದಿನಿಂದ ಬೆಳೆಸಿ, ಅದರ ಶ್ರೇಯಸ್ಸಿಗಾಗಿ ಏನು ಬೇಕಾದರೂ ತ್ಯಾಗಮಾಡಲು ಸಿದ್ಧ ಈ ತಾಯಿ. ಈ ರೀತಿಯ ಮಾತೃಪ್ರೇಮ ಒಂದು ಪ್ರೇರಣೆಯ ರೂಪದಲ್ಲಿ ಎಲ್ಲ ಜೀವಜಂತುಗಳಲ್ಲೂ ಕಂಡುಬರುತ್ತದೆ ಎನ್ನುತ್ತಾರೆ ಮನೋವಿಜ್ಞಾನಿಗಳು. ಇದಕ್ಕೆ ಕಾರಣ ಹೆಣ್ಣಿನಲ್ಲಿ ಉತ್ಪತ್ತಿಯಾಗುವ ಕೆಲವು ಅಂತಃಸ್ರಾವಗಳು. ಇವುಗಳೇ ಮಾತೃತ್ವ ಪ್ರೇರಣೆಯ ಜೈವಿಕ ಆಧಾರವೆನ್ನುತ್ತಾರೆ ಜೀವ ವಿಜ್ಞಾನಿಗಳು. ಪ್ರಾಣಿಗಳಲ್ಲಿ ಇದೊಂದು ಸಹಜ ಪ್ರವೃತ್ತಿಯಾಗಿ (instinct) ಕಾಣಿಸಿಕೊಳ್ಳುತ್ತದೆ. ಆದರೆ ಮಾನವನ ಹಂತಕ್ಕೆ ಬಂದಾಗ, ಈ ಪ್ರೇರಣೆಯು ಕೇವಲ ಅಂತಃಸ್ರಾವಗಳಿಂದ ಮಾತ್ರ ನಿರ್ಧರಿಸಲ್ಪಡದೆ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಇನ್ನಿತರ ಕಾರಣಗಳಿಂದಲೂ ಪ್ರಭಾವಿತವಾಗುತ್ತದೆ ಎಂಬುದು ಅನೇಕ ಸಂಶೋಧನೆಗಳಿಂದ ಸ್ಪಷ್ಟವಾಗಿರುವ ವಿಷಯ. ಪ್ರಸ್ತುತ ನಾವು ಶ್ರೀಮಾತೆ ಶಾರದಾದೇವಿಯವರ ಅಸದೃಶ ಮಾತೃಪ್ರೇಮವನ್ನು ವಿಶ್ಲೇಷಣೆ ಮಾಡಿದರೆ, ಅವರದು ಸ್ತ್ರೀಸಹಜವಾದ ಮಾತೃಪ್ರೇಮವಾಗಿದ್ದರೂ ಅದಕ್ಕೊಂದು ದಿವ್ಯತ್ವದ ಮೆರುಗು ಇದೆ ಎಂಬುದನ್ನು ನಿಸ್ಸಂದೇಹವಾಗಿ ಒಪ್ಪಬಹುದು. ಇದು ಹೇಗೆ ಎನ್ನುವುದನ್ನು ಸ್ವಲ್ಪ ವಿಚಾರ ಮಾಡೋಣ.

ಶ್ರೀಶಾರದಾದೇವಿಯವರು ಹುಟ್ಟಿಬೆಳೆದದ್ದು ಅತ್ಯಂತ ಸಂಪ್ರದಾಯಸ್ಥ ಮನೆತನದಲ್ಲಿ. ಅವರ ತಂದೆತಾಯಂದಿರಿಗೆ ಅವರೇ ಹಿರಿಯ ಮಗಳು. ಹೀಗಾಗಿ ಅವರು ತಮ್ಮ ಅನಂತರ ಹುಟ್ಟಿದ ತಮ್ಮಂದಿರನ್ನು ನೋಡಿಕೊಳ್ಳುವುದರಲ್ಲಿ ಚಿಕ್ಕ ವಯಸ್ಸಿನಿಂದಲೂ ತಮ್ಮನ್ನು ತಾವೇ ತೊಡಗಿಸಿಕೊಳ್ಳುವುದನ್ನು ಬಹಳ ಕಾಣುತ್ತೇವೆ.

ಹೀಗೆ ಭಾರತೀಯ ನಾರಿಯ ಆದರ್ಶವಾದ ತಾಯಿಯ ಪಾತ್ರವನ್ನು ಶ್ರೀಮಾತೆಯವರು ಚಿಕ್ಕವಯಸ್ಸಿನಿಂದಲೇ ಸಹಜವಾಗಿ ಒಪ್ಪಿಕೊಂಡು, ಸಫಲವಾಗಿ ನಿರ್ವಹಿಸುವುದನ್ನು ಕಾಣಬಹುದು.

ಮುಂದೆ ಶ್ರೀರಾಮಕೃಷ್ಣರೊಂದಿಗೆ ವಿವಾಹವಾದ ಬಳಿಕ ಶ್ರೀಶಾರದಾದೇವಿಯವರ ಮನಸ್ಸಿನಲ್ಲಿ ತಾಯ್ತನದ ಬಯಕೆ ಸಹಜವಾಗಿ ಮೂಡಿಬಂದದ್ದು ಆಶ್ಚರ್ಯವೇನಲ್ಲ. ಶ್ರೀಮಾತೆಯವರ ತಾಯಿ ಹಾಗೂ ಅವರ ಇನ್ನಿತರ ಸಂಬಂಧಿಕರು ಶ್ರೀಶಾರದಾದೇವಿಯವರು ತಾಯ್ತನದ ಅನುಭವದಿಂದ ವಂಚಿತರಾದದ್ದನ್ನು ಕಂಡು ಮರುಕಗೊಂಡದ್ದೂ ಸಹ ಸಹಜವೇ. ಒಮ್ಮೆ ಶ್ರೀಮಾತೆಯವರ ತಾಯಿಯವರು ತಮ್ಮ ಮಗಳು ಆಧ್ಯಾತ್ಮಿಕ ವ್ಯಕ್ತಿಯ ಕೈಹಿಡಿದು ಸಂತಾನಭಾಗ್ಯದಿಂದ ವಂಚಿತರಾದರು ಎಂದು ಗೋಳಾಡುತ್ತಾರೆ. ಇದನ್ನು ಆಲಿಸಿದ ಶ್ರೀರಾಮಕೃಷ್ಣರು ಹೇಳುತ್ತಾರೆ, "ನಿಮ್ಮ ಮಗಳಿಗೆ ಮುಂದೆ ಎಂತೆಂಥಾ ಮಕ್ಕಳು ಬರಲಿದ್ದಾರೆ ಎಂದರೆ, ಆಕೆಗೆ 'ಅಮ್ಮ' 'ಅಮ್ಮ' ಎಂದು ಕರೆಸಿಕೊಂಡು ಬೇಸರವಾಗುವಷ್ಟು ಮಕ್ಕಳು ಬರಲಿದ್ದಾರೆ" ಎಂದು. ಇದನ್ನು ಕೇಳಿ ಆ ವೃದ್ಧ ತಾಯಿಯ ಮನಸ್ಸಿಗೆ ಸಮಾಧಾನವಾಯಿತು.

ಇಲ್ಲಿ ನಾವು ಆಲೋಚಿಸಬೇಕಾದ ವಿಷಯವೆಂದರೆ, ಶ್ರೀರಾಮಕೃಷ್ಣರು ತಮ್ಮ ಧರ್ಮಪತ್ನಿಯನ್ನು ಸಂತಾನಭಾಗ್ಯದಿಂದ ವಂಚಿಸಿದರೇ ಎಂಬುದು. ಇದಕ್ಕೆ ಉತ್ತರ ಅಡಗಿರುವುದು ಶ್ರೀಮಾತೆಯವರ ಪವಿತ್ರ ಜೀವನದಲ್ಲಿ. ಒಮ್ಮೆ ಶ್ರೀರಾಮಕೃಷ್ಣರು ಅವರನ್ನು ನೇರವಾಗಿ ಪ್ರಶ್ನಿಸುತ್ತಾರೆ, "ನೀನು ನನ್ನನ್ನು ಸಂಸಾರ ಜೀವನಕ್ಕೆ ಎಳೆಯಲು ಬಂದಿರುವೆ ಏನು? ನಿನಗೆ ಅಂತಹ ಆಸೆ ಇದ್ದರೆ ಹೇಳು, ನಾನು ಆ ಜೀವನವನ್ನು ನಡೆಸಲು ಸಿದ್ಧ' ಎಂದು. ಈ ಪ್ರಶ್ನೆಗೆ ಶ್ರೀಮಾತೆಯವರ ಉತ್ತರ ತುಂಬಾ ವಿಶಿಷ್ಟವಾಗಿರುವುದು ಹಾಗೂ ಅವರ ವ್ಯಕ್ತಿತ್ವದ ಶ್ರೇಷ್ಠತೆಯನ್ನು ಪ್ರತಿಬಿಂಬಿಸುವಂತಹುದು. ಅವರ ಉತ್ತರ: "ನಾನೇಕೆ ನಿಮ್ಮ ದಾರಿಗೆ ಅಡ್ಡ ಬರಲಿ? ನಿಮ್ಮ ದಾರಿಯಲ್ಲಿ ನನ್ನನ್ನೂ ಕರೆದೊಯ್ಯಿರಿ." ಶ್ರೀಮಾತೆಯವರ ಆಗಿನ ವಯಸ್ಸನ್ನು ಪರಿಗಣಿಸಿದರೆ ಈ ಉತ್ತರ ಅತ್ಯಂತ ವಿಚಾರಪೂರಿತವಾದದ್ದು ಎಂದು ತೋರಿಬರುತ್ತದೆ. ಶ್ರೀಮಾತೆಯವರ ತೀಕ್ಷ್ಣ ಬುದ್ಧಿಗೆ ಶ್ರೀಗುರುವಿನ ಮಹೋನ್ನತ ಧ್ಯೇಯ ಗೋಚರವಾಯಿತು. ಹೀಗೆ ಶ್ರೀಮಾತೆಯವರು ತಮ್ಮ ಸಹಜವಾದ ಮಾತೃತ್ವದ ಬಯಕೆಯನ್ನು ಉದಾತ್ತೀಕರಿಸಲು ಅನುವಾಗುವುದನ್ನು ನೋಡಬಹುದು.

ಒಮ್ಮೆ ಶ್ರೀಮಾತೆಯವರು ನೆಲ ಸಾರಿಸುತ್ತಿರುವಾಗ ಶ್ರೀರಾಮಕೃಷ್ಣರು ಅವರಿಗೆ ಹೇಳುತ್ತಾರೆ : "ಮಗುವಿನ ಅನ್ನಪ್ರಾಶನ ಸಮಯದಲ್ಲಿ ನೀನು ವಿವಿಧ ಒಡವೆಗಳನ್ನು ತೊಟ್ಟು ಆನಂದದಿಂದ ಕುಣಿದಾಡಬಹುದು. ಆದರೆ ಅದೇ ಮಗು ತೀರಿಕೊಂಡರೆ ತಲೆ ಚಚ್ಚಿಕೊಂಡು ಅಳಬೇಕಾಗುವುದು." ಶ್ರೀಮಾತೆಯವರು ಎಲ್ಲವನ್ನೂ ಸುಮ್ಮನೆ ಕೇಳಿದರು. ಆದರೆ ಶ್ರೀರಾಮಕೃಷ್ಣರು ಮತ್ತೆ ಮತ್ತೆ ಮಕ್ಕಳ ಮೃತ್ಯುವಿನ ವಿಷಯವನ್ನು ಹೇಳತೊಡಗಲು ಮಾತೆಯವರು ಮೆಲ್ಲನೆ ನುಡಿದರು, "ಅವುಗಳಲ್ಲಿ ಎಲ್ಲವೂ ಸತ್ತುಹೋಗುತ್ತವೇನು?" ಎಂದು. ಶ್ರೀರಾಮಕೃಷ್ಣರು ಈ ಉತ್ತರವನ್ನು ಕೇಳಿ ಅವರನ್ನು ಅಭಿನಂದಿಸುತ್ತಾರೆ. ಲೋಕಗುರುವಾದ ಶ್ರೀರಾಮಕೃಷ್ಣರು ತಮ್ಮ ಪತ್ನಿಯ ಮನದಲ್ಲಿ ಮಕ್ಕಳ ಬಯಕೆ ಏನಾದರೂ ಬಲವಾಗಿ ಹುದುಗಿರುವುದೇ ಎಂಬುದನ್ನು ಪರೀಕ್ಷಿಸಲೋಸುಗ ಈ ರೀತಿ ನುಡಿದರು. ಆದರೆ ಆ ಮಹಾಮಾತೆ ಇದರಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ವಿಜಯಿಗಳಾದರು. ಜಗತ್ತಿನ ಎಲ್ಲರನ್ನೂ ತನ್ನ ಮಕ್ಕಳೆಂದು ಪರಿಗಣಿಸುವ ತಾಯಿಗೆ ಮಕ್ಕಳಿಲ್ಲದ ದುಃಖಕ್ಕೆ ಅವಕಾಶವೇ ಇರುವುದಿಲ್ಲ.

ಶ್ರೀಮಾತೆಯವರ ಜೀವನದ ಮುಖ್ಯ ಘಟ್ಟವಾದ ಷೋಡಶೀ ಪೂಜೆಯ ಉದ್ದೇಶವೇನೆಂಬುದನ್ನು ವಿಚಾರ ಮಾಡೋಣ. ಶ್ರೀರಾಮಕೃಷ್ಣರು ಈ ಪೂಜೆಯನ್ನು ಮಾಡಿದ್ದು ಶ್ರೀಮಾತೆಯವರಲ್ಲಿ ಜಗನ್ಮಾತೃತ್ವವನ್ನು ಜಾಗೃತಗೊಳಿಸುವುದಕ್ಕಾಗಿ. ಶ್ರೀರಾಮಕೃಷ್ಣರು ಮಾತೆಯವರ ಮಾತೃಪ್ರೇಮದ ಅಗಾಧತೆಯನ್ನು ಪರೀಕ್ಷಿಸಿ ಅನಂತರ ಈ ಪೂಜೆಯನ್ನು ಕೈಗೊಂಡು ತಮ್ಮನ್ನು ತಾವೇ ಅವರ ಪದದಡಿ ಸಮರ್ಪಿಸಿಕೊಳ್ಳುತ್ತಾರೆ. ಶ್ರೀಮಾತೆಯವರು ಕೇವಲ ತಮ್ಮ ಭಕ್ತರಿಗೂ, ಸಂಬಂಧಿಕರಿಗೂ ಮಾತ್ರ ತಮ್ಮ ಮಾತೃಪ್ರೇಮವನ್ನು ಹಂಚಲಿಲ್ಲ. ಅವರ ಆ ದಿವ್ಯಪ್ರೇಮವು ಸಕಲರಿಗೂ, ಪ್ರಾಣಿಗಳನ್ನೂ ಒಳಗೊಂಡು, ಅವ್ಯಾಹತವಾಗಿ ಹರಿಯುತ್ತಿತ್ತು. ಇಲ್ಲಿ ಲಲಿತಾಸಹಸ್ರನಾಮದಲ್ಲಿ ಬರುವ ತಾಯಿಯ ಹೆಸರನ್ನು ಉಲ್ಲೇಖಿಸಬಹುದು: "ಅನೇಕ ಕೋಟಿ ಬ್ರಹ್ಮಾಂಡ ಜನನೀ ದಿವ್ಯ ವಿಗ್ರಹಾ." ಸಕಲ ಜೀವಿಗಳನ್ನು ಪ್ರೀತಿಸುವ, ಸ್ವೀಕರಿಸುವ ಶಕ್ತಿಯು ಶ್ರೀಮಾತೆಯವರಲ್ಲಿ ಅಭಿವ್ಯಕ್ತಗೊಂಡಿದ್ದನ್ನು ನಾವು ನೋಡಬಹುದು. ಒಮ್ಮೆ ಅವರು ಹೀಗೆ ನುಡಿಯುತ್ತಾರೆ: "ನಾನು ಕರುಣೆ ತೋರದ ಯಾವ ವ್ಯಕ್ತಿಯೂ, ಅಷ್ಟೇಕೆ, ಒಂದು ಕೀಟವೂ ಇಲ್ಲ."

**ಹಗಲು-ರಾತ್ರಿ ನನ್ನ ಮನಸ್ಸು ಎಷ್ಟು ಎತ್ತರಕ್ಕೆ ಏರಿಹೋಗುತ್ತಿರುತ್ತದೆ ಎಂದರೆ, ಜನರ ಮೇಲಿನ ಕರುಣೆಯಿಂದ ನಾನದನ್ನು ಬಲವಂತವಾಗಿ ಕೆಳಗೆ ಎಳೆದು ತರುತ್ತೇನೆ.—ಶ್ರೀಶಾರದಾದೇವಿ**

ಒಮ್ಮೆ ಯೋಗಿನ್‌ಮಾಗೆ ಶ್ರೀಮಾತೆಯವರು ಹೀಗೆ ನುಡಿಯುತ್ತಾರೆ: "ನೋಡು, ಏನೇ ಹೇಳು, ಯಾರಾದರೂ 'ತಾಯಿ' ಎಂದು ನನ್ನ ಮುಂದೆ ನಿಂತರೆ ಅವರನ್ನು ನಾನು ಕೈಬಿಡಲಾರೆ." ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನು ಬಹು ವಿಧವಾಗಿ ಪರೀಕ್ಷಿಸಿ ಒಪ್ಪಿಕೊಳ್ಳುತ್ತಿದ್ದರು. ಆದರೆ ತಾಯಿಯವರ ಮಡಿಲಲ್ಲಿ ಎಲ್ಲರಿಗೂ ಸ್ವಾಗತ.

ಗಿರೀಶ್ ಘೋಷ್ ಒಮ್ಮೆ ಶ್ರೀಮಾತೆಯವರನ್ನು ಕೇಳಿದರು: "ನೀವು ಯಾವ ರೀತಿಯ ತಾಯಿ?" ಎಂದು. ಅವರೆಂದರು: "ನಾನು ನಿನ್ನ ನಿಜವಾದ ತಾಯಿ. ಕೇವಲ ಗುರುಪತ್ನಿಯಲ್ಲ, ಸ್ವೀಕರಿಸಿದ ತಾಯಿಯೂ ಅಲ್ಲ, ಅಸ್ಪಷ್ಟ ಅರ್ಥದಲ್ಲಿಯೂ ಅಲ್ಲ. ನಾನು ನಿನ್ನ ನಿಜವಾದ ತಾಯಿ." ಶ್ರೀಮಾತೆಯವರ ಈ ಆಶ್ವಾಸನೆಯ ನುಡಿಗಳು ನಮ್ಮನ್ನು ಜೀವನದ ಸಂಕಷ್ಟಗಳಿಂದ ಪಾರುಮಾಡಬಲ್ಲ ದಿವ್ಯ ಔಷಧಿಯಂತೆ. ಸ್ವಾಮಿ ಅಭೇದಾನಂದರು ಶ್ರೀಮಾತೆಯವರನ್ನು ಕುರಿತು ರಚಿಸಿರುವ ಒಂದು ಶ್ಲೋಕ ಹೀಗಿದೆ: **ಶರಣಾಗತ ಸೇವಕ ತೋಷಕರೀಂ ಪ್ರಣಮಾಮಿ ಪರಾಂ ಜನನೀಂ ಜಗತಾಮ್** ||— "ಶರಣಾಗತ ಸೇವಕರಿಗೆ ಸಂತೋಷಕಾರಿಯಾದ ಜಗಜ್ಜನನಿ! ನಿನಗೆ ನಮಿಸುತ್ತೇನೆ." ಇಂತಹ ಮಮತಾಮಯಿಯೂ ಸ್ನೇಹಪರಳೂ ಆದ ಆ ಮಹಾಮಾತೆಯು ನಮ್ಮೆಲ್ಲರನ್ನೂ ಸದಾ ಕಾಪಾಡಲಿ.